ನಮಗೇನು ಎಂದರೆ ನೀವೂ ಕೂಡ ಸರ್ಕಾರದ ನಿರ್ಣಯದಲ್ಲಿ ಭಾಗಿಯಾಗಿ ನಿಮ್ಮ ಸಲಹೆ ಸೂಚನೆ ಮೇರೆಗೆ ಅಲ್ಲೇ ನಾವು ಒಂದು ವಿಚಾರ ವಿನಿಮಯ ಮಾಡಿ ಒಂದು ಹಂತಕ್ಕೆ ಬರಬೇಕು ಎನ್ನುತಕ್ಕ ದೃಷ್ಟಿಯಿಂದ ನಾಳೆ ಎಲ್ಲಾ ವಿರೋಧ ಪಕ್ಷದ ನಾಯಕರು ಮತ್ತು ಕೆಲವು ಹಿರಿಯರು ಹಾಗೂ ಫ್ಲೋರ್ ಲೀಡರ್ಸ್‌ಗಳ ಸಭೆಯನ್ನು 7 ಗಂಟೆಗೆ ಕರೆದಿದ್ದೇವೆ. ಮುಂಜಾನೆ ಇತ್ತು, ಆದರೆ ವಿಧಾನಪರಿಷತ್ತಿನಲ್ಲಿ 10–15ಕ್ಕೆ ಮಾನ್ಯ ರಾಜ್ಯಪಾಲರು ಬರುತ್ತಿದ್ದಾರೆ ಎನ್ನುವ ಕಾರಣದಿಂದ ಸಂಜೆಗೆ ಸಭೆಯನ್ನು ಮುಂದೂಡಿದ್ದೇವೆ. ನಾಳೆ ಮಾತನಾಡುತ್ತೇನೆ. ಈಗಲೂ ಕೂಡ ಮಾನ್ಯ ಸಿಂಧ್ಯಾ ಅವರು ಮತ್ತು ಉಪ ಸಮಿತಿ ಕೂಡ ಸಭೆ ನಡೆಸಿದೆ. ತದ ನಂತರ ಕೂಡ ಅವರು ಬಹಳಷ್ಟು ಹಠ ಹಿಡಿದರು. ಆವಾಗ ತಾವೇನು ಎಂದಿರಿ, ನಾವು ಅಷ್ಟು ಜನರ ಹತ್ತಿರ ಮಾತನಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿ ಒಂದು ಸ್ಮಾಲ್ ಕಮಿಟಿಯನ್ನು ರಚನೆ ಮಾಡಿದ್ದೇವೆ. ನಿನ್ನೆ ಪ್ರಿನ್ಸಿಪಲ್ ಸೆಕ್ರೆಟರಿಯವರು ದೀರ್ಘವಾಗಿ ಚರ್ಚೆ ಮಾಡಿದ್ದಾರೆ. ಶಿಕ್ಷಣ ಸಚಿವರೂ ಕೂಡ ಚರ್ಚೆ ಮಾಡಿದ್ದಾರೆ. ನಿನ್ನೆ ಎಬಿವಿಪಿಯ 30 ಸಾವಿರಕ್ಕೂ ಹೆಚ್ಚು ಜನರು ಬಂದಿದ್ದರು. ಅಲ್ಲಿ ಕೂಡ ನಾನು ಮಾನ್ಯ ಸಿಂಧ್ಯಾರವರನ್ನು ಕಳುಹಿಸಿದ್ದೆ. ಮಾನ್ಯ ಸಿಂಧ್ಯಾರವರೂ ಸಹ ಸರ್ಕಾರ ನಿಮ್ಮ ಪರವಾಗಿದೆ ಎಂದು ಹೇಳಿದರು. ಯಾವಾಗಲೂ ಕೂಡ ಈ ಸರ್ಕಾರದ ಮ್ಯಾನೇಜ್‌ಮೆಂಟಿಗೆ ಮಣಿದು, ಯಾರ ಕೈಗೊಂಬೆಯಾಗಿ ಕೂಡ ಕೆಲಸ ಮಾಡತಕ್ಕದ್ದು ಇಲ್ಲ. ರಾಜ್ಯದ ಮುಖ್ಯ ಮಂತ್ರಿಯಾಗಿ ಈ ಮಾತನ್ನು ಸ್ಪಷ್ಟವಾಗಿ ನಾನು ಹೇಳುತ್ತಿದ್ದೇನೆ ಇವತ್ತು ನಿರ್ಧಾಕ್ಷಿಣ್ಯವಾಗಿ ರಾಜ್ಯದ ಬಡಜನರ, ಮಕ್ಕಳ ಹಿತದೃಷ್ಟಿಯಿಂದ ಸರ್ಕಾರಕ್ಕೆ ಕಳಕಳಿ ಇದೆ. ನಿಮಗೆ ಎಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ಈ ಸರ್ಕಾರಕ್ಕೂ ಕೂಡ ಇದೆ? ಆ ಒಂದು ನಿರ್ಣಯದಲ್ಲಿ ನಾವು ನೀವು ಇಬ್ಬರೂ ಭಾಗಿ ಆಗೋಣ. ಮತ್ತು ಸದನದ ಎಲ್ಲಾ ಸದಸ್ಯರಿಗೆ ಕೂಡ ಒಂದು ಕ್ರೆಡಿಟ್ ಬರುತ್ತದೆ. ನಾಳೆ ಸಮಗ್ರವಾದ ಒಂದು ಚರ್ಚೆ ಆಗುತ್ತದೆ. ಆ ಒಂದು ಚರ್ಚೆ ಯಲ್ಲಿ ಏನೇನು ಮಾಡಬೇಕೋ ಮಾಡೋಣ. ನಾವು ಒಂದುಫಾರ್ಮುಲಾ ಕಂಡು ಹಿಡಿಯುತ್ತೇವೆ. ಅದರ ಆಧಾರದ ಮೇಲೆ ರಾಜ್ಯದಲ್ಲಿರತಕ್ಕ ಚಿಕ್ಕಟ್ಟನ್ನು ಫಾರ್ಮಾಣಿಕವಾಗಿ ಇತ್ಯರ್ಥ ಮಾಡತಕ್ಕ ಪ್ರಯತ್ನ ಮಾಡುತ್ತೇವೆ. ತಾವು ಸಾಕಷ್ಟು ಬೆಳಕು ಚೆಲ್ಲಿದ್ದೀರಿ. ಸಾಕಷ್ಟು ವಿಷಯಗಳು ಕೂಡ ಸರ್ಕಾರದ ಗಮನಕ್ಕೆ ಬಂದಿದೆ. ಅದಕ್ಕೆ ನಾಳೆ ಸಭೆ ಆದ ನಂತರ ಅದರ ಬಗ್ಗೆ ಹೆಚ್ಚಿನ ವಿವರಕ್ಕೆ ಹೋಗಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ ವಿರೋಧ ಪಕ್ಷದ ನಾಯಕರು : ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಇಷ್ಟೇ ಹೇಳುವುದು. ನಿಮ್ಮ ಕಳಕಳಿ ಬಗ್ಗೆ ನಾವ್ಯಾರೂ ಅನುಮಾನ ಪಡುತ್ತಿಲ್ಲ. ಪ್ರಶ್ನೆ ಇರುವಂಥದ್ದು ಕಾಣದ ಕೈಗಳು ಅಷ್ಟು ವರ್ಷಗಳಿಂದ, ಈ ಕಾಲೇಜುಗಳನ್ನು ನಡೆಸುತ್ತಿರುವಂತಹ ಪ್ರೈವೇಟ್ ಮ್ಯಾನೇಜ್‌ಮೆಂಟಿನ ಪ್ರಮುಖರು, ಪ್ರಭಾವಿ ವ್ಯಕ್ತಿಗಳು ಇಷ್ಟೊಂದು ಬಹಿರಂಗವಾಗಿ, ಹತ್ತಾರು ಸಾವಿರ ಜನ ಯುವಕರು ಈ ನಾಡಿನ ಜನ ಏನು ಅಂದು ಕೊಳ್ಳಬಹುದು ಈ ರೀತಿಯು ಬಹಿರಂಗ ಹೇಳಿಕೆಯಿಂದ ಎಂದು ಹಿಂದೆ ಮುಂದೆ ನೋಡದೆ ಮಾತನಾಡುತ್ತಿರುವುದನ್ನು ತಾವು ನೋಡುತ್ತಿದ್ದೀರಿ. ಈಗಾಗಲೇ ಅಡ್ಮಿಷನ್ ಪ್ರಾರಂಭ ಆಗಬಹುದು ಎಂದುಕೊಂಡು, ಎಲ್ಲಾ ಸಿಇಟಿಯದ್ದು ಮುಗಿದು ಪ್ರಾರಂಭ ಆದಂತಹ ಕಾಲದಲ್ಲಿ ನಿಮಗೇ ಗೊತ್ತಿರುವ ಹಾಗೆ ಸುಮಾರು 75–80 ಜನ ಯುವಕರು ನಮಗೆ ಅಡ್ಮಿಷನ್ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ,

ನಮಗೆ ಈ ಫೀಸ್ ಕಟ್ಟುವುದಕ್ಕೆ ಆಗುವುದಿಲ್ಲ ಎಂದು ಹೇಳಿ ಹೊರಗೆ ಬಂದಿರುವುದನ್ನು ತಾವು ನೋಡಿದ್ದೀರಿ. ಇದೆಲ್ಲಾ ನಿಮಗೆ ಗೊತ್ತಿರುವಂತಹ ಸಂಗತಿ. ಇದರ ಆಧಾರದ ಮೇಲೆ ಈ ರೀತಿ ವ್ಯಕ್ತಿಗಳಿಗೆ ಓಬಿಸಿ, ಎಸ್‌ಸಿ:ಎಸ್‌ಟಿ, ಮೆರಿಟ್ ಸ್ಟೂಡೆಂಟ್ಸ್‌ಗೆ ನಾವೇನಾದರೂ ಸರ್ಕಾರ ತುಂಬಿ ಅವರ ಶಿಕ್ಷಣಕ್ಕೆ ತೊಂದರೆ ಮಾಡುವುದಿಲ್ಲ ಎನ್ನುವಂತಹ ಮಾತನು ತಾವು ಹೇಳಿದ್ದೀರಿ. ನಾಳೆ ಮೀಟಿಂಗ್‌ನಲ್ಲಿ ಮ್ಯಾನೇಜ್‌ಮೆಂಟ್‌ನವರ ಹತ್ತಿರ ನೀವು ವೈಯಕ್ತಿಕವಾಗಿ ಅವರದ್ದು ಒಳ್ಳೆಯದೋ, ಕೆಟ್ಟದ್ದೋ, ಬೇಕೋ ಬೇಡ ಎಂದು ಎಲ್ಲವೂ ನಿಮಗೆ ಗೊತ್ತಿರುತ್ತದೆ. ನೀವು ಏನು ಪ್ರಭಾವ ಬೀರುತ್ತೀರೋ ಮಾಡಿ. ಸರಿ ಮಾಡಿ ಎಂದು ಕಳೆದ ಒಂದೂವರೆ ತಿಂಗಳಿಂದ ನಾವು ಕಾದೆವು. ಆದರೆ ಈ ಫಲಶ್ರುತಿ ಏನೂ ಕಾಣದೇ ವಿದ್ಯಾರ್ಥಿ ವಿದ್ಯಾರ್ಥಿನಿಯರು ಮತ್ತು ಅವರ ಪೇರೆಂಟ್ಸ್ ಕಣ್ಣೀರು ಇಟ್ಟು ಅವರ ಆಕ್ರಂದನದ ಗೋಳನ್ನು ತಾವು ನೋಡುತ್ತಿದ್ದೀರಿ. ಈ ಟೈಮಿನಲ್ಲಿ ಮಾರ್ಗ ಏನು? ಈ ವ್ಯತ್ಯಾಸವನ್ನು ತುಂಬುವುದಕ್ಕೆ ಸರ್ಕಾರ ಮುಂದೆ ಬರಬೇಕು. ಮ್ಯಾನೇಜ್‌ಮೆಂಟಿಗೆ ಬರೆ ಎಳೆಯುತ್ತೇವೆ ನಾವು ಹೇಳಿದ ಹಾಗೆ ಕೇಳದಿದ್ದರೆ ಎಂದು ಬಿಗಿ ಮಾಡಲೇಬೇಕು. ಇದು ಮೀಟಿಂಗ್ ಆಗಿ ಬಗೆಹರಿಯುತ್ತದೆ ಎಂದು ನಾನು ಅಂದುಕೊಂಡಿಲ್ಲ. ಇವತ್ತು ನಾನು ಒತ್ತಾಯ ಮಾಡುವುದು ಇಷ್ಟೆ. ದಯಮಾಡಿ ಈ ವ್ಯತ್ಯಾಸದ ಹಣ ಸುಮಾರು 65 ಕೋಟಿ ರೂಪಾಯಿ ಆಗುತ್ತದೆ, ಅದನ್ನು ನೀವು ಭರಿಸುತ್ತೀರಾ? ಆ ಎಸ್‌ಸಿ, ಎಸ್‌ಟಿ, ಓಟಿಸಿ ಮೆರಿಟ ಸ್ಟೂಡೆಂಟ್ಸ್‌ಗಳ ನೆರವಿಗೆ ನೀವು ಬರುತ್ತೀರಾ? ಅವರು ನೆಮ್ಮದಿಯಿಂದ ಓದುವುದಕ್ಕೆ, ಮುಂದಿನ ಶಿಕ್ಷಣ ಮುಂದುವರಿಸುವುದಕ್ಕೆ ಅವಕಾಶ ಮಾಡಿಕೊಡಿ. ಇದೇ ಪ್ರಶ್ನೆ ಇರುಂತಹದು. ಸುಪ್ರೀಂ ಕೋರ್ಟಿನ ತೀರ್ಪಿನ ಬಗ್ಗೆ ನಾನೇನೂ ಚರ್ಚೆ ಮಾಡುವುದಿಲ್ಲ. ಅದು ತೀರ್ಮಾನ ಆಗಿದೆ. ವಾದ ವಿವಾದ ಏನಾಯಿತು? ಸುಪ್ರೀಂ ಕೋರ್ಟಿಗೆ ಏಕೆ ಹೋದಿರಿ? ಸುಪ್ರೀಂ ಕೋರ್ಟಿಗೆ ಹೋದದ್ದು ಸರಿಯೋ ತಪ್ಪೋ.? ಇದೆಲ್ಲವೂ ನಮಗೆ ಅರ್ಥವಾಗದಿರುವಂತಹ ಸಂಗತಿ. ಇಂತಹ ಒಂದು ಸಂದಿಗ್ಧವಾದ ಸಂದರ್ಭದಲ್ಲಿ ನಮ್ಮ ರಾಜ್ಯದ ಯುವಕರು, ಯುವತಿಯರು, ವಿದ್ಯಾರ್ಥಿಗಳು, ಅವರ ಪೇರೆಂಟ್ಸ್ ಕಣ್ಣೀರು ಹಾಕುತ್ತಿರುವಂತಹ ಸಂದರ್ಭದಲ್ಲಿ ಎಲ್ಲೋ ಒಂದು ಕಡೆ ಈ ಸರ್ಕಾರ ಮ್ಯಾನೇಜ್‌ಮೆಂಟ್ ಜೊತೆಗೆ ಕೈಜೋಡಿಸಿಕೊಂಡು ನಾಟಕೀಯವಾಗಿ ನಾವೇನೋ ಮಾಡುತ್ತೇವೆ ಎಂದು ಮಾಡುತ್ತಿರುವಂತಹ ಭಾವನೆ ಬಂದಿರುವುದರಿಂದ ಇದನ್ನು ನಾವು ಪ್ರತಿಭಟನೆ ಮಾಡಿ ವಾಕೌಟ್ ಮಾಡುತ್ತೇವೆ. ದಯಮಾಡಿ ನೀವು 65 ಕೋಟಿ ರೂಪಾಯಿ ತೆಗೆದು ಇಟ್ಟು ಅವರನ್ನು ಉಳಿಸುತ್ತೇವೆ ಎನ್ನುವ ವಿಚಾರ ಮಾಡಬೇಕು ಎಂದು ಹೇಳುತ್ತೇನೆ.

(ಗೊಂದಲ)

(ಈ ಹಂತದಲ್ಲಿ ಬಿ.ಜೆ.ಪಿ. ಸದಸ್ಯರುಗಳು ವಾಕೌಟ್ ಮಾಡಿದರು)

ಮಾನ್ಯ ಸದಸ್ಯರು : ಇದು ಒಳ್ಳೆಯದಲ್ಲ.

ಅಧ್ಯಕ್ಷರು : ಸದನವನ್ನು ನಾಳೆ 12.00 ಗಂಟೆವರೆಗೆ ಮುಂದೂಡಲಾಗಿದೆ.

(ಸದನವು ಸಂಜೆ 6.10ಕ್ಕೆ ಮುಂದೂಡಲ್ಪಟ್ಟು ಮತ್ತೆ ದಿನಾಂಕ 22.7.04 ರಂದು ಮಧ್ಯಾಹ್ನ 12.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)